# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು.

**ಓ ಎಸ್ ನಂ.264-2018** **ಪಿ . ಡಬ್ಲುಃ 3**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಪುಟ್ಟಸ್ವಾಮಿನಾಯ್ಕ<br>ಆಲತ್ತೂರು ಗ್ರಾಮ, ನಂಜನಗೂಡು ತಾ. |
| | **ಸತ್ಯ ಪ್ರತಿಜ್ಞೆಯ** ಮೇರೆಗೆ **ದಿನಾಂಕ** 28-02-2023. |

**ಪಾಟೀ ಸವಾಲುಃ ಶ್ರೀ ಎಂ.ಆರ್.ಎಸ್ ವಕೀಲರಿಂದಃ**

ವಾದಿಗಳು ಚಾಮುಂಡನಾಯ್ಕನ ಮಕ್ಕಳಲ್ಲ ಎಂದರೆ ಸರಿಯಲ್ಲ. ಚಾಮುಂಡನಾಯ್ಕನಿಗೆ ಒಬ್ಬಳೇ ಹೆಂಡತಿ ರಂಗಮ್ಮ ಎಂದರೆ ಸರಿಯಲ್ಲ. ಪುಟ್ಟತಾಯಮ್ಮ ಚಾಮುಂಡನಾಯ್ಕನ 2 ನೇ ಹೆಂಡತಿ ಎಂದರೆ ಸರಿ. ರಂಗಮ್ಮ ಚಾಮುಂಡನಾಯ್ಕನ ಮೊದಲನೆ ಹೆಂಡತಿ ಎಂದರೆ ಸರಿ. ಚಾಮುಂಡನಾಯ್ಕ ರಂಗಮ್ಮನವರ ಜೊತೆಯಲ್ಲೇ ಇದ್ದು ಪುಟ್ಟತಾಯಮ್ಮ ನವರನ್ನು ಮದುವೆ ಆಗಿಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಚಾಮುಂಡನಾಯ್ಕ ಪುಟ್ಟತಾಯಮ್ಮನವರ ಜೊತೆಯಲ್ಲಿಯೇ ಇದ್ದರೂ ಎಂದು ನುಡಿಯುತ್ತಾರೆ. ವಾದಿಗಳು ಚಾಮುಂಡನಾಯ್ಕನ ಮಕ್ಕಳು ಅಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನಗೆ ಚಿಕ್ಕವನಿಂದಲೂ ವಾದಿಗಳು ಚಾಮುಂಡನಾಯ್ಕನ ಮಕ್ಕಳು ಎಂದು ಖುದ್ದಾಗಿ ಗೊತ್ತಿರುತ್ತದೆ ಎಂದು ನುಡಿಯುತ್ತಾರೆ. ಚಾಮುಂಡನಾಯ್ಕ ಅಲ್ಲತ್ತೂರುಹುಂಡಿಯಲ್ಲಿ ಮರಣ ಹೊಂದಿರುವುದಿಲ್ಲ ಎಂದರೆ ಸರಿಯಲ್ಲ. ಚಾಮುಂಡನಾಯ್ಕನ ಅಂತ್ಯ ಸಂಸ್ಕಾರವು ಹೊಸಕೋಟೆಯಲ್ಲಿ ಮಾಡಲಾಗಿರುತ್ತದೆ ಎಂದರೆ ಸರಿ. ಪ್ರತಿವಾದಿಗಳು ಮತ್ತು ಅವರ ತಾಯಿ ರಂಗಮ್ಮ ನವರು ಹೊಸಕೋಟೆಯಲ್ಲಿ ವಾಸವಾಗಿರುತ್ತಾರೆ ಎಂದರೆ ಸರಿ. ಚಾಮುಂಡನಾಯ್ಕ ಆಲತ್ತೂರು ಗ್ರಾಮದಲ್ಲಿ

ವಾಸವಾಗಿರಲಿಲ್ಲ ಹೊಸಕೋಟೆಯಲ್ಲಿ ವಾಸವಾಗಿದ್ದರು ಎಂದರೆ ಸರಿಯಲ್ಲ. ನಾನು ಆಲತ್ತೂರು ಗ್ರಾಮದ ವಾಸಿ ಆಗಿರುವುದರಿಂದ ವಾದಿಗಳ ಮಾತು ಕೇಳಿ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/-**

**ಕಿ.ಪ್ರ.ದ. ನ್ಯಾ ದಂ. ನಂಜನಗೂಡು**